ಕಂಡಿಕೆ 8.6:– ಎಲ್ಲಾ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಯ ಸಾಧ್ಯವಿರುವಷ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಲ್ಲದೇ, ಕನಿಷ್ಟ ಶೇಕಡ 80ರಷ್ಟು ಉದ್ಯೋಗವನ್ನು ಸ್ಥಳೀಯ ಜನರಿಗೆ ನೀಡತಕ್ಕದ್ದು. [ಸಿ ಮತ್ತು ಡಿ ಪ್ರವರ್ಗಗಳ ವಿಷಯದಲ್ಲಿ ಶೇಕಡ 100ರಷ್ಟು ಉದ್ಯೋಗ ಅವಕಾಶವನ್ನು ಸ್ಥಳೀಯ ಜನರಿಗೆ ನೀಡಬೇಕು] ಹಾಗೂ ಉತ್ತೇಜನಗಳನ್ನು ವಿತರಣೆ ಮಾಡುವಾಗ ಈ ವಿಚಾರದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು. ಸ್ಥಳೀಯ ಜನರಿಗೆ ಉದ್ಯೋಗ ನೀಡುವ ಅವಶ್ಯಕತೆಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳು 5 ವರ್ಷಗಳವರೆಗೆ ಮೇಲ್ವಿಚಾರಣೆ ಮಾಡುತ್ತವೆ. ಕೈಗಾರಿಕೆಗಳು ಸ್ಥಳೀಯಜನರಿಗೆ ಮೇಲೆ ತಿಳಿಸಿದ ನಿಬಂಧನೆಗನುಸಾರವಾಗಿ ಉದ್ಯೋಗ ನೀಡಲು ತಪ್ಪಿದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುವ ರಾಜ್ಯಮಟ್ಟದ ಸಮಿತಿಗೆ ತಿಳಿಸಲಾಗುವುದು.

ಹಾಗೂ ಈ ಸಮಿತಿಯು ಮಂಜೂರಾದ ಬಂಡವಾಳ ಸಹಾಯ ಧನವನ್ನು ಮರುವಸೂಲಿ ಮಾಡಲು ಶಿಫಾರಸ್ಸು ಮಾಡುವುದು. ಇದಕ್ಕಾಗಿ ಸಹಾಯಧನವನ್ನು ವಿತರಣೆ ಮಾಡುವ ಮೊದಲು ಘಟಕಗಳಿಂದ ಮುಚ್ಚಳಿಕೆಯೊಂದನ್ನು ಪಡೆಯಲಾಗುವುದು. ಜೊತೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಜಮೀನು ಪಡೆದ ಘಟಕಗಳು ಭೂ ಸ್ವಾಧೀನದಿಂದಾಗಿ ಜಮೀನು ಕಳೆದುಕೊಂಡ ರೈತರ ಪ್ರತಿಯೊಂದು ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡಬೇಕೆಂಬ ನಿಬಂಧನೆಯನ್ನು ಸಹ ಗುತ್ತಿಗೆ ಮತ್ತು ಮಾರಾಟ ಒಪ್ಪಂದದಲ್ಲಿ ಅಳವಡಿಸಲಾಗಿದೆ.

ಇ) 50 ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಮತ್ತು ರಾಜ್ಯ ಸರ್ಕಾರ/ ಸರ್ಕಾರಿ ಸಂಸ್ಥೆಗಳಿಂದ ಮೂಲಭೂತ ಸೌಕರ್ಯ ಹಾಗೂ ರಿಯಾಯಿತಿಗಳನ್ನು ಪಡೆದಿರುವ ಕೈಗಾರಿಕಾ ಘಟಕಗಳಲ್ಲಿ ಮೇಲ್ಕಂಡ ಷರತ್ತಿನ ಪಾಲನೆ ಬಗ್ಗೆ ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾದಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿದೆ.

ಈ) ಕಳೆದ 5 ವರ್ಷಗಳಲ್ಲಿ ಸ್ಥಾಪಿತಗೊಂಡ ಘಟಕಗಳ ಪೈಕಿ (ಮಾಹಿತಿ ತಂತ್ರಜ್ಞಾನ ಘಟಕಗಳನ್ನು ಹೊರತುಪಡಿಸಿ) 129 ಘಟಕಗಳು ನಿಗಧಿತ ಪ್ರಮಾಣದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡದಿರುವುದು ಕಂಡು ಬಂದಿದೆ ಹಾಗೂ ಅಂತಹ ಘಟಕಗಳಿಗೆ ಈಗಾಗಲೇ ನೋಟೀಸ್ ಜಾರಿ ಮಾಡಲಾಗಿದೆ.

ಉ) ಮೇಲೆ ವಿವರಿಸಿದಂತೆ ಕಾಲಾಕಾಲಕ್ಕೆ ಹೊರಡಿಸಲಾಗುವ ಕೈಗಾರಿಕಾ ನೀತಿಯಡಿ ಸ್ಥಳೀಯರಿಗೆ ನಿಗಧಿತ ಪ್ರಮಾಣದಲ್ಲಿ ಉದ್ಯೋಗಾವಕಾಶ ನೀಡಬೇಕೆಂಬ ಷರತ್ತನ್ನು ವಿಧಿಸಲಾಗಿದ್ದು, ಸದರಿ ಷರತ್ತುಗಳ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಸರ್ಕಾರವು ಬದ್ಧವಾಗಿದೆ. ನಿಯಮಗಳನ್ನು ಪಾಲಿಸದ ಘಟಕಗಳಿಗೆ ನೀಡಲಾದ ಸವಲತ್ತುಗಳನ್ನು/ ರಿಯಾಯಿತಿಗಳನ್ನು ಹಿಂದಕ್ಕೆ ಪಡೆಯುವುದು ಸೇರಿದಂತೆ ಘಟಕಗಳ ವಿರುದ್ಧ ಅಗತ್ಯ ಕ್ರಮ ಜರುಗಿಸಲಾಗುವುದು.

5119 (6111) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು;

ಆ) ಸದರಿ ಹಾಸ್ಟೆಲ್‌ಗಳಲ್ಲಿ ಸ್ವಂತ ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಮತ್ತು ಸೂಕ್ತ ಸಿಬ್ಬಂದಿ ವರ್ಗದವರನ್ನು ವ್ಯವಸ್ಥೆಗೊಳಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಸದರಿ ವ್ಯವಸ್ಥೆಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಹಾಸ್ಟೆಲ್‌ಗಳಲ್ಲಿ ಪ್ರವೇಶಾವಕಾಶವನ್ನು ಕೋರಿ ಶೈಕ್ಷಣಿಕ ಸಾಲಿನಲ್ಲಿ ಬಂದ ಅರ್ಜಿಗಳು ಎಷ್ಟು;

ಉ) ಎಷ್ಟು ಜನರಿಗೆ ಪ್ರವೇಶಾವಕಾಶವನ್ನು ನೀಡಲಾಗಿದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಬಸವಕಲ್ಯಾಣ ಮತಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ಒಟ್ಟು 13 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. ವಿವರ ಈ ಕೆಳಕಂಡಂತಿದೆ.

ವಿವರ	ಬಾಲಕ	ಬಾಲಕಿ	ಒಟ್ಟು
ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳು	11	–	11
ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳು	1	1	2
ಒಟ್ಟು	**12**	**1**	**13**

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಬಸವಕಲ್ಯಾಣ ಮತಕ್ಷೇತ್ರದಲ್ಲಿ ಕೆಳಕಂಡಂತೆ ಒಟ್ಟು 7 ವಿದ್ಯಾರ್ಥಿ ನಿಲಯಗಳನ್ನು ನಿರ್ವಹಣೆ ಮಾಡುತ್ತಿದೆ.

ಮೆಟ್ರಿಕ್ ಪೂರ್ವ ವಸತಿ ನಿಲಯಗಳು			ಮೆಟ್ರಿಕ್ ನಂತರದ ವಸತಿ ನಿಲಯಗಳು			ಒಟ್ಟು
ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು	
4	1	5	1	1	2	7

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಬಸವ ಕಲ್ಯಾಣ ಮತಕ್ಷೇತ್ರದಲ್ಲಿ ಮಂಟಾಳ ಎಂಬಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವು ನಡೆಯುತ್ತಿರುತ್ತದೆ.

ಆ) ಹಿಂದುಳಿದ ವರ್ಗಗಳ ಇಲಾಖೆಯ ಒಟ್ಟು 13 ನಿಲಯಗಳ ಪೈಕಿ 9 ನಿಲಯಗಳಿಗೆ ಸ್ವಂತ ಕಟ್ಟಡ ಇರುತ್ತದೆ. 4 ವಿದ್ಯಾರ್ಥಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಿರ್ವಹಿಸಲಾಗುತ್ತಿದ್ದು, ಈ ನಿಲಯಗಳಲ್ಲಿ, ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ಒಟ್ಟು 52 ಹುದ್ದೆಗಳಿದ್ದು ಈ ಪೈಕಿ 46 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಕೆಲವು ಹುದ್ದೆಗಳು ಖಾಲಿಯಿರುತ್ತದೆ.

ಪರಿಶಿಷ್ಟ ಜಾತಿಯ ಹಾಲಿ ಇರುವ 7 ವಿದ್ಯಾರ್ಥಿ ನಿಲಯಗಳ ಪೈಕಿ 4 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿ ಇವೆ. ಉಳಿದ 3 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ಇದ್ದು, ಅವುಗಳಲ್ಲಿ 2 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕೈಗೊಂಡಿದ್ದು, ಪೂರ್ಣಗೊಳ್ಳುವ ಹಂತದಲ್ಲಿ ಇರುತ್ತದೆ. ಸದರಿ ತಾಲ್ಲೂಕಿನ 7 ವಿದ್ಯಾರ್ಥಿ ನಿಲಯಗಳಲ್ಲಿರುವ ಸಿಬ್ಬಂದಿ ವರ್ಗದ ವಿವರ ಕೆಳಕಂಡಂತೆ ಇದೆ. ಖಾಲಿಯಿರುವ ಹುದ್ದೆಗಳನ್ನು ಸರ್ಕಾರದ ನೇರ ನೇಮಕಾತಿ ಬಗ್ಗೆ ನಿರ್ಭಂದನೆ ಸಡಿಲಗೊಳಿಸಿದ ನಂತರ ಭರ್ತಿ ಮಾಡಲಾಗುವುದು.

ಕ್ರ.ಸಂ.	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ಭರ್ತಿಯಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	ಸಿ–ಗ್ರೂಪ್ ವಾರ್ಡನ್/ಮೇಲ್ವಿಚಾರಕರು	7	6	1
2	ಡಿ–ಗ್ರೂಪ್ ಅಡಿಗೆಯವರು/ಅಡಿಗೆ ಸಹಾಯಕರು/ ಕಾವಲುಗಾರರು	17	9	8
	ಒಟ್ಟು	**24**	**15**	**9**

ಪರಿಶಿಷ್ಟ ವರ್ಗಗಳ ಮಂಟಾಳ ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿಯೇ ಪ್ರಾರಂಭಿಸಲಾಗುವುದು. ಮೂಲಭೂತ ಸೌಲಭ್ಯಗಳನ್ನು ಭಾಗಶಃ ಒದಗಿಸಲಾಗಿದೆ. ಸದರಿ ವಿದ್ಯಾರ್ಥಿನಿಲಯದಲ್ಲಿ ಮಂಜೂರಾದ ಮೇಲ್ವಿಚಾರಕರು–1 ಹುದ್ದೆ, ಅಡಿಗೆಯವರು–2, ಅಡಿಗೆ ಸಹಾಯಕರು–1 ಹುದ್ದೆ, ಪ್ರಸ್ತುತ ಮೇಲ್ವಿಚಾರಕರ ಹುದ್ದೆ ಭರ್ತಿಯಿದ್ದು ಅಡಿಗೆಯವರು–2, ಅಡಿಗೆ ಸಹಾಯಕರು–1 ಹುದ್ದೆ ಖಾಲಿ ಇರುತ್ತದೆ.

ಇ) ಕಟ್ಟಡಗಳನ್ನು ಆಯವ್ಯಯದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಕೈಗೊತ್ತಿಕೊಳ್ಳಲಾಗುವುದು. ಉಳಿದ ಹುದ್ದೆಗಳನ್ನು ಆರ್ಥಿಕ ಮಿತವ್ಯಯದ ಸಡಿಲಿಕೆಯೊಂದಿಗೆ ಭರ್ತಿ ಮಾಡಲಾಗುವುದು.

ಈ) ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳಲ್ಲಿ 2005–06ನೇ ಸಾಲಿನಲ್ಲಿ ಪ್ರವೇಶ ಕೋರಿ ಬಂದ ಒಟ್ಟು ಅರ್ಜಿಗಳ ಸಂಖ್ಯೆ 1097. ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ 702. ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಕೋರಿ ಬಂದ 308 ಅರ್ಜಿಗಳಲ್ಲಿ 142 ಅರ್ಜಿಗಳಿಗೆ ಪ್ರವೇಶ ನೀಡಲಾಗಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ಕೋರಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ:25–07–2005ರಂದು ಕೊನೆಯ ದಿನಾಂಕಯೆಂದು ನಿಗಧಿಪಡಿಸಿದೆ. ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ 22 ಅರ್ಜಿಗಳು ಬಂದಿದ್ದು, 8 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗಿದೆ.

5121 (6114) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕದ ಪ್ರದೇಶಗಳಲ್ಲಿ ಎಷ್ಟು ಎಕರೆ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತಿದೆ;

ಆ) ಅದರ ಪ್ರಮಾಣ ಎಷ್ಟು;

ಇ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಬೆಳೆಯನ್ನು ಆರ್ಥಿಕ ಬೆಳೆಯಾಗಿ ಜನಪ್ರಿಯಗೊಳಿಸಲು ಸಾಧ್ಯಾಸಾಧ್ಯತೆಗಳ ಸಂಬಂಧವಾಗಿ ಸರ್ಕಾರ ಅಧ್ಯಯನ ನಡೆಸಿದೆಯೇ;

ಈ) ಹಾಗಿದ್ದಲ್ಲಿ ಈ ಸಂಬಂಧವಾಗಿ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಸರ್ಕಾರವು ಹೈದರಾಬಾದ್ ಕರ್ನಾಟಕದಲ್ಲಿ ಇದುವರೆವಿಗೂ ಈ ಸಂಬಂಧವಾಗಿ ಜಾರಿಗೊಳಿಸಿದ ಯೋಜನೆಗಳಿಗೆ ವೆಚ್ಚ ಮಾಡಿದ ಹಣದ ಮೊತ್ತವೆಷ್ಟು? (2004–05 ಮತ್ತು 2005–06ನೇ ಸಾಲಿನ ವಿವರ ನೀಡುವುದು).